ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ತಾವು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಲೆಕ್ಕ ಹಾಕಿದರೆ ಪಲ್ಲಾ ಒಂದಕ್ಕೆ 8 ರೂಪಾಯಿ ಸಬ್ಸಿಡೈಸ್ ಮಾಡಿದ ಹಾಗಾಯಿತು. ಹಾಗಾದರೆ ಮಾರಾಟದ ದರವೇನು?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಎಡವರಿಗೂ, ಶ್ರೀಮಂತರಿಗೂ ಆಹಾರ ದಿನಸಿಯನ್ನು ಒಂದೇ ದರದಲ್ಲಿ ಮಾರುತ್ತೀರೋ ಅಥವಾ ದರದಲ್ಲಿ ವ್ಯತ್ಯಾಸಮಾಡುತ್ತೀರೋ?

ಶ್ರೀ ಟಿ. ಮರಿಯಪ್ಪನವರು.—ಮನುಷ್ಯರ ಅಂತಸ್ಥಿನ ಮೇರೆ ಸಬ್ಸಿಡೈಸ್ ಮಾಡುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಕಡಮೆ ದರಕ್ಕೆ ಮಾರುತ್ತಿರುವುದರಿಂದ ಕೆಲವರಿಗೆ ಅನಾನುಕೂಲವಲ್ಲವೆ?

ಅಧ್ಯಕ್ಷರು.—ಅದು ತಮ್ಮ ಅಭಿಪ್ರಾಯ.

ಶ್ರೀ ಬಿ. ಹುಚ್ಚೇಗೌಡರು.—ರೈತರಿಗೆ ಗೊಬ್ಬರ ನಗ್ಯೆರೆ ಕೊಟ್ಟು ತೋರಿಸುತ್ತಿದ್ದ ಅನೇಕ ರಿಯಾಯಿತಿಗಳನ್ನು ಈಗ ರದ್ದುಮಾಡಿಲ್ಲವೆ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ನಿಮ್ನ ಪಂಗಡ).—ಈಗ ಗ್ರಾಮಾಂತರದಲ್ಲಿರುವ ಜನರಿಗೆ ಪಟ್ಟಣವಾಸದಲ್ಲಿರುವವರಿಗೆ ಕೊಡುವ ಹಾಗೆ ರೇಷನ್ ಕೊಡುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ಗ್ರಾಮಾಂತರದಲ್ಲಿ ಜಾರಿಯಲ್ಲಿರುವುದು ಇಫಾರ್ಮಲ್ ರೇಷನಿಂಗ್.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಆದರೂ ಕೊಡಬೇಕಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಕೊಡುತ್ತಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಕೊಡುವಿರುವ ಅಂಶವನ್ನು ತಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸುತ್ತೀರಾ?

ಶ್ರೀ ಟಿ. ಮರಿಯಪ್ಪನವರು.—ಖಂಡಿತ ಅದನ್ನು ಸರಿಪಡಿಸುತ್ತೇವೆ. ತಕ್ಷಣ ಅಂಥ ಸಂದರ್ಭಗಳಲ್ಲಿ ಸೂಕ್ತ ಕಾರ್ಯಕ್ರಮ ಕೈಗೊಂಡಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಇಷ್ಟಾದರೂ ಆಹಾರ ದವನ ಸರಿಯಾಗಿ ದೊರೆಯುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಮರಿಯಪ್ಪನವರು.—ಅದನ್ನು ಸರಿಪಡಿಸುತ್ತಿದ್ದೇವೆ.

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).—ಈಗ ಹೊರಗಿನಿಂದ ಬರುವ ಪದಾರ್ಥಗಳಿಗೆ ನಮ್ಮ ದೇಶದ ಪದಾರ್ಥಗಳಿಗಿಂತ ಹೆಚ್ಚು ಬೆಲೆಯಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಕೆ. ಸುಬ್ಬರಾಯರು.—ಎಷ್ಟೆಂದು ಹೇಳುವುದಕ್ಕೆ ಸಾಧ್ಯವೆ?

ಶ್ರೀ ಟಿ. ಮರಿಯಪ್ಪನವರು.—ವರ್ಷ ವರ್ಷ ಯಾವ್ಯಾವ ಪ್ರದೇಶದಿಂದ ಬರುತ್ತದೆಯೋ ಅದರಮೇಲೆ ಹೋಗುತ್ತದೆ.

ಶ್ರೀ ಕೆ. ಸುಬ್ಬರಾಯರು.—ಹಾಗೆಯೇ ನಮ್ಮ ದೇಶದ ಬೆಳೆಗೂ ಹೆಚ್ಚು ಬೆಲೆ ಕೊಡಬೇಕೆಂಬ ಬಗ್ಗೆ ಮನವಿ ಬಂದಿದೆಯೆ?

ಶ್ರೀ ಟಿ ಮರಿಯಪ್ಪನವರು.—ಅದು ಬಂದಿದ್ದರ ಮೇರೆ ಬೆಲೆಯನ್ನು ಪಲ್ಲಾ ಒಂದಕ್ಕೆ 17 ರಿಂದ 21 ರೂಪಾಯಿಗಳವರೆಗೆ ಹೆಚ್ಚಿಸಿದ್ದೇವೆ.

Mr. SPEAKER.—Hon'ble Member must sit down after putting the question so that the Hon'ble Minister may answer.

(The Member sat down.)

ಶ್ರೀ ಕೆ. ಸುಬ್ಬರಾಯರು.—ಈ ಸಂದರ್ಭದಲ್ಲಿ ಇಲ್ಲಿಂದ ಅಲ್ಲಿಗೆ ಧಾನ್ಯಗಳನ್ನು ಸಾಗಿಸುವುದಕ್ಕೆ ಎಷ್ಟು ಖರ್ಚಾಗಿರುತ್ತದೆ?

Mr. SPEAKER.—That does not arise.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಇದರಿಂದ ಸರ್ಕಾರಕ್ಕಾಗಿರುವ ನಷ್ಟವೆಷ್ಟು?

Sri T. MARIAPPA.—That question was already answered. It cannot be said so easily.

Mr. SPEAKER.—Question time is over.

Delay in Supplying Financial Statements to Members.

Mushir-ul-Mulk J. MAHOMED IMAM (Chitaldrug *cum* Tumkur—Muslim).—Sir, I have one representation to make. We are very much handicapped for not being in receipt of the relevant documents connected with the Budget. Tne Hon'ble Finance Minister was pleased to promise yesterday that copies of the Budget and much more than that copies of the Financial Memorandum would be supplied to us. Till now we are not supplied with the copies. We are groping in the dark. And what is more, demands in a particular form, must be given to us as in previous sessions to enable us to send notices of cut motions on them. The previous practice in this regard was liberal. The list of demands used to be placed in our hands much earlier. But this time even to-day the demands are not in our hands. They must be placed in our hands immediately to enable us to give notice of cut motions in time, because under the rules we have to send notices of cut motions three days before the demands are taken up. If they are not supplied to us, we will be prevented from sending cut motions. So I request that the list of demands be given to us immediately. I do not know what the difficulty on the part of the Government is to supply us with these documents. It may be that the Budget could not be disclosed in time. But at least when it was disclosed, necessary financial documents must be given to us. So, I request the Chair to see that the Demands and the

Financial Memorandum are given to us immediately. Otherwise, we may have to draw our own conclusions.

Sri K. CHENGALARAYA REDDY (Leader of the House).—Sir, regarding the matter that has been brought to the notice of the House by my Hon'ble friend Janab Mahomed Imam, I would like to say this. I do admit that some inconvenience may have been caused to Hon'ble Members by the relevant documents relating to the budget not having been placed in their hands by now. The Budget Estimates have already been placed in the hands of Hon'ble Members. After the Budget speech was made yesterday, in accordance with the practice that we have got to follow, the Budget Estimates have been placed in the hands of members. So far as the Financial Minister's speech is concerned, it was delivered on the floor of the House yesterday evening and it was expected that copies would be ready for distribution to Members yesterday itself overnight. But, owing to some unforeseen difficulties in the Printing Press, copies have been received just now and they will be placed in the hands of the members immediately. So far as the Explanatory Memorandum is concerned, copies will be in the hands of the members before the day is over.

Mr. SPEAKER.—Demands?

Sri K. CHENGALARAYA REDDY.—That also will be in their hands before the close of the day. As I have already stated on previous occasions, this time we had to work against time owing to various causes beyond our control. The official year had to be suddenly changed from July to April and that has been one of the causes requiring us to work against time. Secondly, owing to various matters which had be discussed with the Government of India, particularly points arising out of the transitory provisions in the Constitution, there was some difficulty in supplying copies in time. I do expect Hon'ble Members to bear with the Government in this exceptional situation and condone the slight delay that has been caused. So far as the time required for cut motions is concerned, Sir, I do realise the difficulty of the Hon'ble Members. So I would like the Hon'ble Chair to consider the extension of the time within which cut motions could be received. The Chair has got the inherent right of waiving the notice required as per Rules, and I submit, Sir, that you will please exercise your discretion and authority and allow Hon'ble Members to give notice of cut motions a day later than what is required under the Rules. That will help the Hon'ble Members and this House to discharge their duties satisfactorily and I think with this statement of mine, Hon'ble Members will feel satisfied and we will proceed with our work in this House so far as the Budget is concerned.

Sri L. SIDDAPPA (Shimoga District-General).—So, General Discussion of the Budget will be postponed by a day?

Sri K. CHENGALARAYA REDDY.—There is no need to postpone General Discussion because there may be many live members who may be prepared to begin discussion the next day itself. Such of those Members who are not prepared and who want to make an intensive study, may undoubtedly do so. And such others who may still want to further probe into all the items, will have a clear Sunday, so that they may come to the House and make illuminating and interesting speeches during discussion of demands. Under the circumstances, I do not think it is necessary to postpone the Budget Discussion by a day.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).—ಅಧ್ಯಕ್ಷರ ಗಮನಕ್ಕೆ ಒಂದು ವಿಷಯವನ್ನು ತರಬೇಕೆಂದಿಚ್ಛಿಸುತ್ತೇನೆ. ನಮ್ಮ ಈ ಸಭೆಯಲ್ಲಿ ಮಾತೃಭಾಷೆಯಾದ ಕನ್ನಡಕ್ಕೆ ಸ್ವಲ್ಪವೂ ಬೆಲೆಯಿಲ್ಲದ ಹಾಗೆ ಕಾಣುತ್ತದೆ. ಈಗಿನ ಭಾರತ ರಾಜ್ಯಾಂಗದ ಪ್ರಕಾರ ಇನ್ನು ಹದಿನೈದು ವರ್ಷಗಳೊಳಗೆ ಇಂಗ್ಲಿಷ್ ಭಾಷೆ ನಮ್ಮ ದೇಶದಿಂದ ಹೋಗಬೇಕೆಂದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇದು ತಮಗೂ ಗೊತ್ತೇ ಇದೆ. ಹೀಗಿರುವಾಗ ನಮ್ಮ ಕನ್ನಡಕ್ಕೆ ಇಲ್ಲಿ ಎಷ್ಟು ಮಟ್ಟಿನ ಪ್ರಾಶಸ್ತ್ಯವನ್ನು ಕೊಡಬೇಕೆಂಬುದು ಕೂಡ ಗೊತ್ತೇ ಇದೆ.

ಅಧ್ಯಕ್ಷರು.—ಕನ್ನಡಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂಬ ವಿಚಾರದಲ್ಲಿ ಯಾವ ಅನುಮಾನವೂ ಇಲ್ಲವಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಇದುವರೆಗೆ ಬಡ್ಜೆಟ್ ಪ್ರತಿಗಳನ್ನು ಇಂಗ್ಲಿಷ್ ಮತ್ತು ಕನ್ನಡ ಎರಡರಲ್ಲೂ ಕೊಡುತ್ತಿದ್ದರು. ಈಗ ಬರೀ ಇಂಗ್ಲಿಷ್ ಪ್ರತಿಗಳನ್ನು ಮಾತ್ರ ಕೊಟ್ಟಿದ್ದಾರೆ. ಹೀಗಾದರೆ ಹದಿನೈದು ವರ್ಷಗಳಲ್ಲಿ ಇಂಗ್ಲಿಷ್ ಹೊರಟು ಹೋಗಲು

ಕೇಗೆ ಸಾಧ್ಯ? ಆದುದರಿಂದ ಕನ್ನಡ ಬಡ್ಜೆಟ್ ಪ್ರತಿ ಗಳನ್ನೂ ಸದಸ್ಯರಿಗೆ ಒದಗಿಸಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

Statement laid on the Table.

Sri T. MARIAPPA (Home Minister).—Sir, I beg leave to lay on the Table of this House Ordinance No. 1 of 1950, the Mysore Village Panchayet (Amendment) Ordinance, 1950.

RESOLUTIONS.

Mr. SPEAKER.—Resolutions may be taken up now.

Resolution No. 1.

Sri M. N. JOIS (Mysore District—General).—Sir, in view of the covenants entered into by the Government of India with the Maharaja of Mysore in relation to his properties and the consequent action that is being taken by the Government of Mysore, I do not propose to move the resolution standing in my name and which reads thus:

"This Assembly is of the opinion that a Committee of five should be constituted by the Government of Mysore to scrutinise the rights, title and interest of the immovable properties in the possession of the Palace, *i.e.*, Rajpramukh of Mysore."

Sri H. M. CHANNABASAPPA (Mysore District—General).—On a point of information, Mr. Speaker. Can a member make a statement when he withdraws the resolution?

Mr. SPEAKER.—I thought he was moving his resolution. Honourable Member is not moving his resolution.

Next resolution: Mr. S. Kariappa.

Resolution No. 2.

Free Technical advice to private persons for constructing small dams, anecuts, etc.

*ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಸಿಟ್ಟಿ).—ಸ್ವಾಮಿ, ನಾನು ಸಭೆಯ ಮುಂದೆ ಮಂಡಿಸ ಬೇಕೆಂದಿರುವ ನಿರ್ಣಯ ಈ ರೀತಿ ಇದೆ:

"This Assembly is of the opinion that the Government of Mysore should take effective step by giving free technical guidance to private persons in the construction of small dams, anecuts, pick up-weirs, etc., of their own, so that the much-talked-of "Grow More Food" scheme may become more fruitful."

ಸ್ವಾಮಿ, ಈಗ ದೇಶದಲ್ಲಿ ಆಹಾರದ ಕೊರತೆ ಎಷ್ಟು ಮಟ್ಟಿಗಿದೆಯೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಈಗಿರತಕ್ಕ ಈ ಕೊರತೆಯನ್ನು ನಿವಾರಣೆ ಮಾಡಬೇಕಾದರೆ ಕೈಗೊಳ್ಳಬೇಕಾದ ಮಾರ್ಗಗಳನ್ನು ಒಂದೆರಡಲ್ಲ ಅನೇಕ ಮಾರ್ಗಗಳನ್ನು ಅನುಸರಿಸಬೇಕಾಗಿದೆ. ಈಗಾಗಲೇ ಸರ್ಕಾರದವರು ಈ ವಿಷಯದಲ್ಲಿ ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರವಾದುದರಿಂದ ನಾನೇನೂ ಹೇಳ ಬೇಕಾಗಿಲ್ಲ. ಆದರೆ ಇಷ್ಟೇ ಸಾಕೆ ಎಂಬ ಪ್ರಶ್ನೆ ಏಳುತ್ತದೆ. ಸರ್ಕಾರದ ಪ್ರಯತ್ನಗಳಲ್ಲದೆ ಇನ್ನು ಬೇರೆ ಯಾವ ಯಾವ ಪ್ರಯತ್ನಗಳಿವೆ, ಆಹಾರ ಪದಾರ್ಥಗಳನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಾದ ಯಾವ ಯಾವ ಪ್ರಯತ್ನಗಳಿವೆ, ಎಂಬುದನ್ನು ಯೋಚನೆ ಮಾಡಿ, ಅಂತಹ ಎಲ್ಲಾ ಕಾರ್ಯಕ್ರಮಗಳನ್ನೂ ಕೈಕೊಳ್ಳಬೇಕಾದುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ. ಇಂತಹ ಪ್ರಯತ್ನಗಳಲ್ಲಿ ನಾನು ಇಲ್ಲಿ ಸೂಚಿಸಿರುವುದು ಒಂದಾಗಿದೆ ಎಂಬುದನ್ನು ಈ ಸಭೆಯ ಮುಂದೆ ತಿಳಿಸಲಚ್ಚಿಸುತ್ತೇನೆ.

ಜನಗಳು ತಮ್ಮ ತಮ್ಮ ಜಮೀನುಗಳ ಹತ್ತಿರ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿದ್ದರೆ ಮತ್ತು ಹಾಗೆ ಕಟ್ಟಿಕೊಳ್ಳಲು ಅವರಿಗೆ ಅಭಿರಾಷೆಯಿದ್ದರೆ, ಹಾಗೆ ಕಟ್ಟಿಕೊಳ್ಳಲು ಮುಂದೆ ಬರುವುದಾದರೆ, ಸರ್ಕಾರದವರು ಅಂಥವರಿಗೆ ಕೆಲವು ಸಹಾಯ ಸೌಕರ್ಯಗಳನ್ನು ಕೊಡುವುದಕ್ಕೆ ಒಂದು ಅವಕಾಶ ವಿರಬೇಕು. ಈ ರೀತಿ ಒಂದು ಅವಕಾಶವನ್ನು ಸರ್ಕಾರದವರು ಕಲ್ಪಿಸಿಕೊಡಬೇಕೆಂಬುದು ಈ ನಿರ್ಣಯದ ಉದ್ದೇಶವಾಗಿದೆ. ಪ್ರಕೃತ ಸ್ಥಿತಿಯಲ್ಲಿ ಇಂತಹ ಒಂದು ಅವಶ್ಯಕತೆಯೇನಿದೆ ಎಂಬ ಬಗ್ಗೆ ಕೆಲವು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ಬಯಸುತ್ತೇನೆ. ದೇಶದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಸ್ಥೂಲವಾಗಿ ಮೂರೂವರೆ ಎಕರೆಗಳಷ್ಟು ಜಮೀನಾದರೂ ಇರಬೇಕಾದುದು ಅವಶ್ಯಕವೆಂಬುದು ಕೆಲವು ಪ್ರವೀಣರು ಹೇಳಿರತಕ್ಕ ಅಭಿಪ್ರಾಯ. ಅಂತರರಾಷ್ಟ್ರೀಯ ಮಟ್ಟ, ಅಂದರೆ international standard ನ ಪ್ರಕಾರ ಪ್ರತಿಯೊಬ್ಬ ಮನುಷ್ಯನಿಗೂ ಎರಡೂವರೆ ಎಕರೆಗೆ ಕಡಿಮೆಯಿಲ್ಲದಷ್ಟು ಜಮೀನು ಇರಬೇಕು. ಈ ದಿವಸ ಒಂದು ಪ್ರಶ್ನೆಗೆ ಸರ್ಕಾರದವರು ಕೊಟ್ಟಿರುವ ಉತ್ತರದ ಪ್ರಕಾರ ಬತ್ತ, ರಾಗಿ, ಜೋಳ ಮುಂತಾದ ಆಹಾರ ಧಾನ್ಯಗಳನ್ನು ಬೆಳೆಯತಕ್ಕ ಜಮೀನಿನ ವಿಸ್ತೀರ್ಣ ಕೇವಲ ಸುಮಾರು 33 ಲಕ್ಷ ಎಕರೆ. ನಮ್ಮ ಸಂಸ್ಥಾನದಲ್ಲಿ 80 ಲಕ್ಷ ಜನಸಂಖ್ಯೆಯಿರುವಾಗ ಕೇವಲ 33 ಲಕ್ಷ ಎಕರೆ ಜಮೀನಿನ ಬೆಳೆಯಿಂದ ಇಷ್ಟು ಜನರಿಗೆ ಆಹಾರ ಧಾನ್ಯವನ್ನೊದಗಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಯೋಚಿಸಿ ನೋಡಬೇಕಾಗಿದೆ. ಈ ಸಮಯದಲ್ಲಿ ಮತ್ತೊಂದು ವಿಚಾರವನ್ನು ಪರ್ಯಾಲೋಚಿಸುವುದು ಅವಶ್ಯಕ. ಬೇರೆ ಹಲವಾರು ಪ್ರಾಂತಗಳಲ್ಲಿ ವ್ಯವಸಾಯವಾಗುವ ತರೀ ಜಮೀನಿನ ವಿಸ್ತೀರ್ಣವನ್ನು ನೋಡಬೇಕಾಗಿದೆ. ಬಿಹಾರಿನಲ್ಲಿರತಕ್ಕ ವ್ಯವಸಾಯ ಪ್ರದೇಶದಲ್ಲಿ ಶೇಕಡ 40 ರಷ್ಟು ತರೀ ಜಮೀನು, ಸಂಯುಕ್ತ ಪ್ರಾಂತದಲ್ಲಿ ಶೇಕಡ 40ರಷ್ಟು ತರೀ ಜಮೀನು, ಬೊಂಬಾಯಿ ಪ್ರಾಂತದಲ್ಲಿ ಶೇಕಡ 4ರಷ್ಟು ಮಾತ್ರ ತರೀ ಜಮೀನು, ಮೈಸೂರು ದೇಶದಲ್ಲಿ ಶೇಕಡ 8ರಷ್ಟು ತರಿ ಜಮೀನಿದೆ. ಹೀಗಿರುವಾಗ ಇಷ್ಟು ಜನರಿಗೆ ಆಹಾರವನ್ನೊದಗಿಸುತ್ತೇವೆಂದು ಹೇಳಿದರೆ ಅದು ಯಾರಾದರೂ ಒಪ್ಪತಕ್ಕ ಮಾತೆ? ಆದಕಾರಣ ನಾವು